# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ **23-10-2019ರಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯ** ನಡವಳಿಗಳು.

<u>ಹಾಜರಿದ್ದ ಸದಸ್ಯರು:</u>

| | | |
|---|---|---|
| 1. | ಪ್ರೊ. ಜಿ. ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಪ್ರೊ. ಮಹದೇವ | ಸದಸ್ಯರು |
| 3. | ಕು. ಸಹನಾ ಶಿವಪ್ಪ | ಸದಸ್ಯರು |
| 4. | ಶ್ರೀ ಸಿ. ಜಯರಾಮ | ಸದಸ್ಯರು |
| 5. | ಡಾ. ಕೆ.ಕೆ. ವಿಶಾಲಾಕ್ಷಿ | ಸದಸ್ಯರು |
| 6. | ಶ್ರೀ ಜಿ. ಅಶ್ವತನಾರಾಯಣ | ಸದಸ್ಯರು |
| 7. | ಪ್ರೊ. ಕೆ.ಟಿ. ಅಪ್ಪಾಜಪ್ಪ | ಸದಸ್ಯರು |
| 8. | ಪ್ರೊ. ಕೆ.ಎಂ. ಮಹದೇವನ್<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 9. | ಪ್ರೊ. ಟಿ.ಎಸ್. ದೇವರಾಜ,<br>ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |
| 10. | ಪ್ರೊ. ಆರ್. ಶಿವಪ್ಪ<br>ಕುಲಸಚಿವರು | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

<u>ಹಾಜರಾಗದ ಸದಸ್ಯರು:</u>

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು. ನಂತರ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

| | |
|---|---|
| I.I | ದಿನಾಂಕ 23-08-2019ರಂದು ನಡೆದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 23-08-2019ರಂದು ನಡೆದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| I.II | ದಿನಾಂಕ 11-09-2019ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 11-09-2019ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |

| | |
|---|---|
| 2019/10.1 | Sarada Vilas Educations Institute, Krishnamurthypuram, Mysuru, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ B.Sc., (Hon's) (DS & AI) ಕೋರ್ಸನ್ನು ಹೊಸದಾಗಿ ಪ್ರಾರಂಭಿಸಲು ಮಾನ್ಯತೆ ನೀಡುವ ಕುರಿತು – ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರಿರುವ ಬಗ್ಗೆ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ Sarada Vilas Educations Institute, Krishnamurthypuram, Mysuru, ಇವರ ಸಂಸ್ಥೆಯಲ್ಲಿ 40 ವಿದ್ಯಾರ್ಥಿಗಳ ಸಂಖ್ಯಾಮಿತಿಯೊಂದಿಗೆ Specialized Programme ಅಡಿಯಲ್ಲಿ B.Sc., (Hon's) (DS & AI) ಕೋರ್ಸನ್ನು ಹೊಸದಾಗಿ ಪ್ರಾರಂಭಿಸಲು ಸಿಂಡಿಕೇಟ್ ಅನುಮೋದಿಸಿತು. |
| 2019/10.2 | JSS Institute of Speech & Hearing, M.G. Road, Mysuru ಇವರಿಗೆ ಹೊಸದಾಗಿ Speech & Hearing ವಿಷಯದಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ – ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ನೀಡುವ ಬಗ್ಗೆ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ JSS Institute of Speech & Hearing, M.G. Road, Mysuru ಇವರಿಗೆ ಹೊಸದಾಗಿ Speech & Hearing ವಿಷಯದಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನ ಕೇಂದ್ರದ ಮಾನ್ಯತೆ ನೀಡಲು ಸಭೆಯು **ಅನುಮೋದಿಸಿತು.** |
| 2019/10.3 | ಸಮಾಜಕಾರ್ಯ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸಿರುವ ಬಗ್ಗೆ– ಅನುಸಮರ್ಥನೆಗಾಗಿ. |
| ತೀರ್ಮಾನ | ಪ್ರೊ. ಆರ್. ಶಿವಪ್ಪನವರು ಸರ್ಕಾರದ ಆದೇಶದಂತೆ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ದಿನಾಂಕ 7–9–2019ರಿಂದ ಅನ್ವಯವಾಗುವಂತೆ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ಸಮಾಜಕಾರ್ಯ ಅಧ್ಯಯನ ವಿಭಾಗದಲ್ಲಿ ಪ್ರೊ. ಆರ್. ಶಿವಪ್ಪನವರು ಕಾರ್ಯನಿರ್ವಹಿಸುತ್ತಿದ್ದ ವಿಭಾಗದ ಅಧ್ಯಕ್ಷರ ಹುದ್ದೆಗೆ ಎದುರಾಗಿ ವಿಭಾಗದಲ್ಲಿ ಜೇಷ್ಠತೆಯಲ್ಲಿ ಹಿರಿಯರಾಗಿದ್ದು ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಹೆಚ್.ಎಸ್.ಚಂದ್ರಮೌಳಿ ಅವರನ್ನು ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದೋ ಮೊದಲು ಘಟಿಸುವುದೋ ಅಲ್ಲಿಯವರೆವಿಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಕಮಾಡಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2019/10.4 | ಪ್ರೊ. ಚಂದ್ರಶೇಖರ್ ಅಡಿಗ, ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಿರುವ ಬಗ್ಗೆ– ಅನುಸಮರ್ಥನೆಗಾಗಿ. |
| ತೀರ್ಮಾನ | ಪ್ರೊ. ಚಂದ್ರಶೇಖರ್ ಅಡಿಗ, ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರನ್ನು ಎರಡು ವರ್ಷಗಳ ಅವಧಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 53(10)ರ ಅನ್ವಯ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಿರುವುದನ್ನು **ಸಭೆಯು ಅನುಸಮರ್ಥಿಸಿತು.** |
| 2019/10.5 | ಮೈಸೂರು ವಿಶ್ವವಿದ್ಯಾನಿಲಯವು USDS-APHIS, USA ಇವರೊಡನೆ ಯೋಜನೆಯನ್ನು ಕೈಗೊಳ್ಳುವ ಸಂಬಂಧ Cooperative Agreement (ಒಡಂಬಡಿಕೆ) ಮಾಡಿಕೊಂಡಿರುವುದನ್ನು ಅನುಸಮರ್ಥನೆಗಾಗಿ ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ಎಸ್.ಚಂದ್ರನಾಯಕ, The Principal Scientist and Principal Investigator (ICAR-AICPMIP), ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ USDS-APHIS, USA ವತಿಯಿಂದ ಮಂಜೂರಾಗಿರುವ "Global |

| | |
|---|---|
| | Sequence of Downy Mildew Pathogens in Cereal Crops" ಎಂಬ ಸಂಶೋಧನಾ ಯೋಜನೆಯನ್ನು ಕೈಗೊಳ್ಳಲು ಅನುಮತಿ ನೀಡಿರುವುದನ್ನು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಮತ್ತು USDA-APHIS, USA ಇವೆರಡು ದೇಶಗಳ ನಡುವೆ Cooperative Agreementಗೆ ಸಹಿ ಮಾಡಿರುವುದನ್ನು ಸಿಂಡಿಕೇಟ್ **ಅನುಸಮರ್ಥಿಸಿತು.** |
| 2019/10.6 | International Institute for Assisted Reproductive Technology and Research Centre, 3rd Floor, Gopal Gowda Shanthaveri Memorial Hospital, Nazarbad, Mysore, ಈ ಸಂಸ್ಥೆಯವರು ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು Specified Studies/Specialized studies and Research Statutes 2008ರಡಿ ನಡೆಯುತ್ತಿರುವ M.Sc. (Assisted Reproduction & Embryology ಕೋರ್ಸಿಗೆ ಹೆಚ್ಚುವರಿಯಾಗಿ 04 ಸೀಟುಗಳನ್ನು ನೀಡಿರುವ ಕುರಿತು ಅನುಸಮರ್ಥನೆಗಾಗಿ. |
| ತೀರ್ಮಾನ | International Institute for Assisted Reproductive Technology and Research Centre, 3rd Floor, Gopal Gowda Shanthaveri Memorial Hospital, Nazarbad, Mysore ಈ ಸಂಸ್ಥೆಯವರು ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು Specified Studies/Specialized Studies and Research Statutes 2008ರಡಿ ನಡೆಸುತ್ತಿರುವ M.Sc. (Assisted Reproduction & Embryology ಕೋರ್ಸಿಗೆ ಹೆಚ್ಚುವರಿಯಾಗಿ 04 ಸೀಟುಗಳಿಗೆ 2019–20ನೇ ಸಾಲಿಗೆ ಮಾತ್ರ ನಿಗಧಿಪಡಿಸಿ ಆದೇಶ ನೀಡಿರುವುದನ್ನು **ಸಭೆಯು ಅನುಸಮರ್ಥಿಸಿತು.** |
| 2019/10.7 | 2020–21ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಸಂಯೋಜನೆ ನವೀಕರಣ, ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳ ಸಂಯೋಜನೆ ನವೀಕರಣ, ಕಾಲೇಜುಗಳಲ್ಲಿ ಹೊಸ ವ್ಯಾಸಾಂಗ ಕ್ರಮಗಳನ್ನು ಪ್ರಾರಂಭಿಸಲು, ಹಾಲಿ ಇರುವ ಪ್ರವೇಶಾತಿ ಮಿತಿಯಲ್ಲಿ ಹೆಚ್ಚುವರಿ ಪ್ರವೇಶಾತಿ ನೀಡಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಇರುವ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಿಸುವ ಶಿಕ್ಷಣ ಕಾಲೇಜುಗಳ ಸಂಯೋಜನೆ ನವೀಕರಿಸಲು ಮತ್ತು ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಕುರಿತು. |
| | ಅವಶ್ಯಕ ಮೂಲಭೂತ ಸೌಕರ್ಯಗಳೊಂದಿಗೆ ಯು.ಜಿ. ಕೋರ್ಸ್‌ಗಳನ್ನು ನಡೆಸುತ್ತಿರುವ ಹಾಗೂ ಪಿಹೆಚ್.ಡಿ. ವಿದ್ಯಾರ್ಹತೆ ಹೊಂದಿರುವಂತಹ ಒಬ್ಬರು ಪ್ರಾಧ್ಯಾಪಕರು, ಇಬ್ಬರು ಸಹಾಯಕ ಪ್ರಾಧ್ಯಾಪಕರು ಇರಬೇಕೆಂಬ ಷರತ್ತಿನೊಂದಿಗೆ ಕಾಲೇಜುಗಳಿಗೆ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಅನುಮತಿ ನೀಡುವುದು ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ಒಳಿತೆಂದು ಸಭೆಯು ಅಭಿಪ್ರಾಯಿಸಿತು. |
| ತೀರ್ಮಾನ | 2020–21ನೇ ಶೈಕ್ಷಣಿಕ ಸಾಲಿಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/10.8 | 2019–20ನೇ ಶೈಕ್ಷಣಿಕ ಸಾಲಿಗೆ ಕಾಲೇಜಿನಲ್ಲಿ ಹಾಲಿ ಇರುವ ವಿದ್ಯಾರ್ಥಿ ಪ್ರಮಾಣಕ್ಕೆ ವಿದ್ಯಾರ್ಥಿಗಳ ಹಾಗೂ ಪೋಷಕರ ಒತ್ತಡದ ಮೇರೆಗೆ ಪ್ರಾಂಶುಪಾಲರುಗಳಿಂದ ಬಂದಿರುವ ಮನವಿಯಂತೆ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣವನ್ನು ತಾತ್ಕಾಲಿಕವಾಗಿ ನೀಡಿರುವ ಬಗ್ಗೆ. |
| ತೀರ್ಮಾನ | ಸರ್ಕಾರಿ ಆದೇಶದಂತೆ ಈಗಾಗಲೇ ಆಯಾ ಕಾಲೇಜುಗಳ ಸಂಖ್ಯಾಮಿತಿಗನುಗುಣವಾಗಿ ಶೇ. 15ರಷ್ಟು ವಿದ್ಯಾರ್ಥಿಗಳಿಗೆ ಪದವಿ ತರಗತಿಗಳಿಗೆ ಪ್ರವೇಶ ಮಾಡಿಕೊಳ್ಳಲು ಅನುಮತಿ ನೀಡಿರುವುದನ್ನು ಗಮನಿಸಿದ ಸಿಂಡಿಕೇಟ್ 2019–20ನೇ ಶೈಕ್ಷಣಿಕ ಸಾಲಿಗೆ ಕಾಲೇಜಿನಲ್ಲಿ ಹಾಲಿ |

| | |
|---|---|
| | ಇರುವ ವಿದ್ಯಾರ್ಥಿ ಪ್ರಮಾಣಕ್ಕೆ, ವಿದ್ಯಾರ್ಥಿಗಳ ಹಾಗೂ ಪೋಷಕರ ಒತ್ತಡದ ಮೇರೆಗೆ ಪ್ರಾಂಶುಪಾಲರುಗಳ ಕೋರಿಕೆ ಮೇರೆಗೆ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ತಾತ್ಕಾಲಿಕವಾಗಿ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣವನ್ನು ನೀಡುವಂತೆ ಶಿಫಾರಸ್ಸು ಮಾಡಿರುವುದರ ಅನ್ವಯ ಆದೇಶ ನೀಡಿರುವುದನ್ನು ಸಭೆಯು **ಅನುಸಮರ್ಥಿಸಿತು.** |
| 2019/10.9 | ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತರಾಗಿರುವ ಅಧ್ಯಾಪಕರುಗಳು ಸಿ.ಎ.ಎಸ್ ಪದೋನ್ನತಿ ಸಂಬಂಧ ಸಲ್ಲಿಸಿರುವ ಅರ್ಜಿಯ ಬಗ್ಗೆ. |
| ತೀರ್ಮಾನ | ಈಗಾಗಲೇ ನಿವೃತ್ತಿ ಹೊಂದಿರುವ ಅಧ್ಯಾಪಕರುಗಳಿಗೆ ಸಿ.ಎ.ಎಸ್. ಪದೋನ್ನತಿ ನೀಡಿ ವೇತನ ಶ್ರೇಣಿಯನ್ನು ಪಿಂಚಣಿ ಸೌಲಭ್ಯಗಳಿಗೆ ಮಾತ್ರ ಪರಿಗಣಿಸಲು ಸಭೆಯು ತೀರ್ಮಾನಿಸಿತು. |
| 2019/10.10 | 2020ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋಮಾನ ತಲುಪಿ ನಿವೃತ್ತರಾಗುವ ನೌಕರರಿಗೆ ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | 2020ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋಮಾನ ತಲುಪಿ ನಿವೃತ್ತರಾಗುವ ಉದ್ಯೋಗಿಗಳಿಗೆ ಅನುಮತಿ ನೀಡಲು ಸಭೆಯು ತೀರ್ಮಾನಿಸಿತು. |
| 2019/10.11 | ಡಾ. ಎನ್.ಎಸ್. ರಂಗರಾಜು, ನಿವೃತ್ತ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ಸಂಶೋಧನಾ ಸಹಾಯಕರಾಗಿ ಕಾರ್ಯನಿರ್ವಹಿಸಿದ ಅವಧಿಯನ್ನು ಸಿಎಎಸ್ ಅಡಿಯಲ್ಲಿ ಪದೋನ್ನತಿಗೆ ಪರಿಗಣಿಸಿದ್ದರೂ. ಈ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಅವಧಿಯನ್ನು Non Vacation Department ಉದ್ಯೋಗಿಯೆಂದು ಪರಿಗಣಿಸಿ ಗಳಿಕೆ ರಜೆಯನ್ನು ಮಂಜೂರು ಮಾಡಬೇಕೆಂದು ಸಲ್ಲಿಸಿರುವ ಮನವಿ ಬಗ್ಗೆ. |
| ತೀರ್ಮಾನ | ಡಾ. ಎನ್.ಎಸ್. ರಂಗರಾಜು, ನಿವೃತ್ತ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ಸಂಶೋಧನಾ ಸಹಾಯಕರಾಗಿ ಕಾರ್ಯನಿರ್ವಹಿಸಿದ ಅವಧಿಯನ್ನು Non Vacation Department ಉದ್ಯೋಗಿಯೆಂದು ಪರಿಗಣಿಸಿ ಗಳಿಕೆ ರಜೆಯನ್ನು ಡಾ. ಬಸವಲಿಂಗು ಅವರಿಗೆ ಮಂಜೂರು ಮಾಡಿರುವಂತೆ ಇವರಿಗೂ ಮಂಜೂರು ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/10.12 | ದಿವಂಗತ ಮೋಹನ್‌ಕುಮಾರ್ ಎಂ. ಪ್ರಥಮ ದರ್ಜೆ ಗುಮಾಸ್ತರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಪತ್ನಿಯಾದ ಶ್ರೀಮತಿ. ಭವ್ಯರಾಣಿರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಪರಿನಿಯಮಗಳಡಿಯಲ್ಲಿ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರಾಗಿ ನೇಮಕ ಮಾಡಿಕೊಳ್ಳಲು ಮಾತ್ರ ಅವಕಾಶವಿರುವುದನ್ನು ಗಮನಿಸಿದ ಸಿಂಡಿಕೇಟ್ ಶ್ರೀಮತಿ ಭವ್ಯರಾಣಿಯವರು ಪ್ರಥಮ ದರ್ಜೆ ಗುಮಾಸ್ತರಾಗಿ ನೇಮಕ ಮಾಡಿಕೊಳ್ಳುವಂತೆ ಕೋರಿರುವುದರಿಂದ ಸದರಿಯವರ ಮನವಿಯಂತೆ ಸರ್ಕಾರಕ್ಕೆ ಪತ್ರ ಬರೆದು ಸ್ಪಷ್ಟೀಕರಣ ಪಡೆದ ನಂತರ ಸರ್ಕಾರದ ಆದೇಶದನ್ವಯ ಮುಂದಿನ ಕ್ರಮ ಜರುಗಿಸಲು ಸಭೆಯು ತೀರ್ಮಾನಿಸಿತು. |
| 2019/10.13 | South Asia Institute of Advanced Christian Studies, # 363, Doddagubbi Cross Road, Kothanur, Bengalure, Specialized ಕೇಂದ್ರದ ವಿಳಾಸವನ್ನು M-50/A, 1st Phase, Kuvempunagara, Mysore - 5700023 ಇಲ್ಲಿಗೆ ಸ್ಥಳ ಬದಲಾವಣೆ ಮಾಡುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರಿ. |
| ತೀರ್ಮಾನ | South Asia Institute of Advanced Christian Studies, # 363, Doddagubbi Cross Road, Kothanur, Bengalure, Specialized ಕೇಂದ್ರದ ವಿಳಾಸವನ್ನು M-50/A, 1st Phase, Kuvempunagara, Mysore - 5700023 ಇಲ್ಲಿಗೆ ಸ್ಥಳ |

| | |
|---|---|
| | ಬದಲಾವಣೆ ಮಾಡುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2019/10.14 | Diocesan ಕ್ರಿಶ್ಚಿಯಾನಿಟಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | Diocesan ಕ್ರಿಶ್ಚಿಯಾನಿಟಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ವಹಿಸಲು ಸಭೆಯು ತೀರ್ಮಾನಿಸಿತು. |
| 2019/10.15 | ಡಾ. ಶ್ರೀನಿವಾಸಮೂರ್ತಿ ಎಂ. ಸಂಶೋಧನಾ ಅಧಿಕಾರಿ, ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಅವರ ಮನವಿಯ ಕುರಿತು. |
| ತೀರ್ಮಾನ | ಡಾ. ಎಂ. ಶ್ರೀನಿವಾಸಮೂರ್ತಿಯವರ ಮನವಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಕೂಲಂಕಷವಾಗಿ ಪತ್ರ ಬರೆದು ನಂತರ ಸರ್ಕಾರದ ನಿರ್ದೇಶನದಂತೆ ಮುಂದಿನ ಕ್ರಮ ಜರುಗಿಸಲು ಸಭೆಯು ತೀರ್ಮಾನಿಸಿತು. |
| 2019/10.16 | Ayur Matam Academic Institute of Ayurveda & Yogic Sciences, Mysuru ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ 1. B.Sc. (Ayurveda) 2. Diploma in Ayurveda Panchakarma & Yoga 3. PG Diploma in Marma Chikitsa 4. Certificate Course in kalaripayattu 5. Certificate Course in Ayurveda Panchakarma ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಮಾನ್ಯತೆ ನೀಡುವ ಕುರಿತು– ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕ್ರಮಕೈಗೊಂಡಿರುವ ಬಗ್ಗೆ– ಅನುಸಮರ್ಥನೆಗಾಗಿ. |
| ತೀರ್ಮಾನ | Ayur Matam Academic Institute of Ayurveda & Yogic Sciences, Mysuru ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ 1. B.Sc. (Ayurveda) 2. Diploma in Ayurveda Panchakarma & Yoga 3. PG Diploma in Marma Chikitsa 4. Certificate Course in kalaripayattu 5. Certificate Course in Ayurveda Panchakarma ಕೋರ್ಸುಗಳನ್ನು ಪ್ರತಿ ಕೋರ್ಸ್‌ಗೆ 40 ವಿದ್ಯಾರ್ಥಿಗಳ ಸಂಖ್ಯಾಮಿತಿಯೊಂದಿಗೆ ಹೊಸದಾಗಿ ಪ್ರಾರಂಭಿಸಲು ಮಾನ್ಯತೆ ನೀಡುವ ಕುರಿತು ವಿಶ್ವವಿದ್ಯಾನಿಲಯದಿಂದ ರಚಿಸಲಾಗಿದ್ದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕ್ರಮಕೈಗೊಂಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2019/10.17 | Malabar Institute of Optometry, (A Unit of MEH Health Care (P) Ltd, 4th Division, 16th Ward, B.N. Road, Gundulpet ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ B.Sc.(Optometry) 4 Years ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಮಾನ್ಯತೆ ನೀಡುವ ಕುರಿತು – ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕ್ರಮಕೈಗೊಂಡಿರುವ ಬಗ್ಗೆ – ಅನುಸಮರ್ಥನೆಗಾಗಿ. |
| ತೀರ್ಮಾನ | Malabar Institute of Optometry, (A Unit of MEH Health Care (P) Ltd, 4th Division, 16th Ward, B.N. Road, Gundulpet ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ B.Sc.(Optometry) 4 Years ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಮಾನ್ಯತೆ ನೀಡುವ ಕುರಿತು – ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕ್ರಮಕೈಗೊಂಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| 2019/10.18 | ಮೈಸೂರು ವಿಶ್ವವಿದ್ಯಾನಿಲಯ ಮತ್ತು PHI Seeds Private Limited, Hyderabad ಇವುಗಳ ನಡುವೆ ಕೈಗಾರಿಕಾ ಅನುನಯ ಕೇಂದ್ರದ ಮೂಲಕ ಕೈಗಾರಿಕೆಗಳಿಗೆ ಸಲಹಾ ಸೇವೆಗಳನ್ನು ಪಡೆಯುವ ವಿಷಯದಲ್ಲಿ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ. |

| | |
|---|---|
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯ ಮತ್ತು PHI Seeds Private Limited, Hyderabad ಇವುಗಳ ನಡುವೆ ಒಡಂಬಡಿಕೆ ಮಾಡಿಕೊಂಡು ಕೈಗಾರಿಕಾ ಅನುನಯ ಕೇಂದ್ರದ ಮೂಲಕ ಕೈಗಾರಿಕೆಗಳಿಗೆ ಸಲಹಾ ಸೇವೆಗಳನ್ನು ಪಡೆಯುವ ಕುರಿತಂತೆ ಕಾನೂನು ಸಲಹೆಗಾರ ಅಭಿಪ್ರಾಯ ಪಡೆಯಲಾಗಿದ್ದು ಅದರಂತೆ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಅನುಮೋದಿಸಿತು. |
| 2019/10.19 | CAS Promotion to teachers appointed Prior to 31-12-2008 – Clarification thereof given by the UGC-reg. |
| ತೀರ್ಮಾನ | ಸಭೆಯು ಈ ವಿಷಯವನ್ನು ಗಮನಿಸಿ ಅನುಮೋದಿಸಿತು. |
| 2019/10.20 | 2019–20ನೇ ಶೈಕ್ಷಣಿಕ ಸಾಲಿನಿಂದ ಬಿ.ಜಿ.ಎಸ್., ದೈಹಿಕ ಶಿಕ್ಷಣ ಮಹಾವಿದ್ಯಾಲಯ ಕಾಲೇಜಿನ ಸ್ಥಳ ಬದಲಾವಣೆ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಸಂಯೋಜನೆ ಹೊಂದಿರುವ ಬಿ.ಜಿ.ಎಸ್., ದೈಹಿಕ ಶಿಕ್ಷಣ ಮಹಾವಿದ್ಯಾಲಯ, ಬಿ.ಜಿ.ನಗರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಈ ಕಾಲೇಜನ್ನು ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಇಲ್ಲಿಗೆ ಸ್ಥಳಾಂತರಿಸಲು ಸ್ಥಳೀಯ ತನಿಖಾ ಸಮಿತಿಯ ವರದಿಯ ಶಿಫಾರಸ್ಸನ್ನು ಅನುಮೋದಿಸಿದ ಸಿಂಡಿಕೇಟ್ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 59(5)ರ ಮೇರೆಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿತು. |
| 2019/10.21 | ಪ್ರೊ. ಪಿ.ಕೆ. ಪಾಟಿಲ್, ವಿಶ್ವವಿದ್ಯಾನಿಲಯದ ಗ್ರಂಥಪಾಲಕರು ಮತ್ತು ಅಧ್ಯಕ್ಷರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಎಂಬ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ದಾನಿಗಳು ಕೋರಿರುವಂತೆ ಹಾಗೂ ದತ್ತಿಯ ನಿಬಂಧನೆಯಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಹಣವನ್ನು M.Sc. in Library and Information Science ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕ/ಉತ್ತಮ ಗ್ರೇಡ್ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಉದ್ದೇಶದಿಂದ **"ಪ್ರೊ. ಪಿ.ಕೆ. ಪಾಟಿಲ್, ವಿಶ್ವವಿದ್ಯಾನಿಲಯದ ಗ್ರಂಥಪಾಲಕರು ಮತ್ತು ಅಧ್ಯಕ್ಷರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಚಿನ್ನದ ಪದಕ ದತ್ತಿ"** ಸ್ಥಾಪನೆ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| 2019/10.22 | ದಿವಂಗತ ಶ್ರೀಮತಿ ದೇವಿರಮ್ಮ ಸಿ. ಶಿವಣ್ಣ ಇವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ದಾನಿಗಳು ಕೋರಿರುವಂತೆ ಹಾಗೂ ದತ್ತಿಯ ನಿಬಂಧನೆಯಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಹಣವನ್ನು M.A. Kannada ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕ/ಉತ್ತಮ ಗ್ರೇಡ್ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಉದ್ದೇಶದಿಂದ **"ದಿವಂಗತ ಶ್ರೀಮತಿ ದೇವಿರಮ್ಮ ಸಿ. ಶಿವಣ್ಣ ಚಿನ್ನದ ಪದಕ ದತ್ತಿ"** ಸ್ಥಾಪನೆ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| 2019/10.23 | ಪ್ರೊ. ಬಿ. ನಾಗಪ್ಪ ಅಭಿನಂದನಾ ನಗದು ಬಹುಮಾನ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ದಾನಿಗಳು ಕೋರಿರುವಂತೆ ಹಾಗೂ ದತ್ತಿಯ ನಿಬಂಧನೆಯಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಹಣವನ್ನು M.Sc. in Library and Information Science ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕ/ಉತ್ತಮ ಗ್ರೇಡ್ ಪಡೆದು ಪ್ರಥಮ |

| | |
|---|---|
| | ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ನಗದು ಬಹುಮಾನವನ್ನು ನೀಡುವ ಉದ್ದೇಶದಿಂದ **"ಪ್ರೊ. ಬಿ. ನಾಗಪ್ಪ ಅಭಿನಂದನಾ ನಗದು ಬಹುಮಾನ ದತ್ತಿ"** ಸ್ಥಾಪನೆ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| 2019/10.24 | ದೂರಶಿಕ್ಷಣ ನಿರ್ದೇಶನಾಲಯದ ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆ ನಿಗದಿಪಡಿಸಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | ದೂರಶಿಕ್ಷಣ ನಿರ್ದೇಶನಾಲಯದ ವಿದ್ಯಾರ್ಥಿಗಳಿಗೆ ಸಂಪರ್ಕ ತರಗತಿಗಳನ್ನು ಮತ್ತು ಸ್ವಯಂ ಕಲಿಕಾ ಪಾಠಗಳನ್ನು ನುರಿತ ವಿಷಯ ತಜ್ಞರುಗಳಿಂದ ಸಿದ್ಧಪಡಿಸಿದ್ದು ಇಂತಹ ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆ ನಿಗಧಿಪಡಿಸಿ ಕ್ರಮಕೈಗೊಂಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2019/10.25 | ದಿನಾಂಕ: 14-10-2019 ರಂದು ಸನ್ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ನಗರ ವ್ಯಾಪ್ತಿಯ ವಿಶ್ವವಿದ್ಯಾನಿಲಯ ವಿದ್ಯಾರ್ಥಿನಿಲಯಗಳ ಶಿಕ್ಷಕ ಸಲಹೆಗಾರರು ಹಾಗೂ ವಿಶ್ವವಿದ್ಯಾನಿಲಯ ಕಾರ್ಯಪಾಲಕ ಅಭಿಯಂತರರನ್ನೊಳಗೊಂಡ ಸಭೆಯ ಶಿಫಾರಸ್ಸಿನ ನಡವಳಿಯ ಆಯ್ದ ವಿಷಯಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಬಗ್ಗೆ. |
| ತೀರ್ಮಾನ | ದಿನಾಂಕ: 14-10-2019 ರಂದು ಸನ್ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ನಗರ ವ್ಯಾಪ್ತಿಯ ವಿಶ್ವವಿದ್ಯಾನಿಲಯ ವಿದ್ಯಾರ್ಥಿನಿಲಯಗಳ ಶಿಕ್ಷಕ ಸಲಹೆಗಾರರು ಹಾಗೂ ವಿಶ್ವವಿದ್ಯಾನಿಲಯ ಕಾರ್ಯಪಾಲಕ ಅಭಿಯಂತರರನ್ನೊಳಗೊಂಡ ಸಭೆಯ ಶಿಫಾರಸ್ಸಿನ ನಡವಳಿಯ ಆಯ್ದ ವಿಷಯಗಳನ್ನು ಅನುಮೋದಿಸಿದ ಸಿಂಡಿಕೇಟ್ ಅವಶ್ಯವಾಗಿ ಬೇಕಾಗಿರುವ ಎಲೆಕ್ಟ್ರೀಷಿಯನ್, ಪ್ಲಂಬರ್ ಮತ್ತು ಕಾರ್ಪೆಂಟರ್ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸಭೆಯು ತೀರ್ಮಾನಿಸಿತು. |
| 2019/10.26 | Retirement Teachers of Constituent College during the Calendar year 2020 |
| Decision : | Approved. |
| 2019/10.27 | ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗ ಮತ್ತು ಪ್ರಾಚೀನ ಇತಿಹಾಸ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರೊ. ಎಸ್. ರವಿ ಇವರ ವಿಭಾಗಧ್ಯಕ್ಷರ ಅವಧಿಯು ದಿನಾಂಕ: 03-11-2019ಕ್ಕೆ ಅಂತ್ಯಗೊಳ್ಳಲಿದ್ದು ನಂತರದ ಜೇಷ್ಠತೆಯಲ್ಲಿ ಹಿರಿಯರಾಗಿರುವ ಡಾ. ಗೂಟಿ ದಿವಾನ್‌ಜಿರವರು ದಿನಾಂಕ 03-10-2019ರ ತಮ್ಮ ಪತ್ರದಲ್ಲಿ ಅನಾರೋಗ್ಯದ ನಿಮಿತ್ತ ಹಾಗೂ ನಿವೃತ್ತಿಗೆ ಕೇವಲ ಮೂರುವರೆ ವರ್ಷಗಳು ಬಾಕಿಯಿರುವುದರಿಂದ ವಿಭಾಗಧ್ಯಕ್ಷರ ಹುದ್ದೆಗೆ ತಮ್ಮನ್ನು ಪರಿಗಣಿಸಬಾರದಾಗಿ ಕೋರಿರುವುದರಿಂದ ನಂತರದ ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ. ಬಿ.ಎಸ್. ಬೀರಾದರ್ ಅವರನ್ನು ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ: ಮತ್ತು<br>ಡಾ. ಕೆ. ಪ್ರಭು, ಪ್ರಾಚೀನ ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿಭಾಗಧ್ಯಕ್ಷರ ಅವಧಿಯು ದಿನಾಂಕ 03-11-2019ಕ್ಕೆ ಅಂತ್ಯಗೊಳ್ಳಲಿದ್ದು ನಂತರದ ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ. ಜಿ. ಕರಿಯಪ್ಪ ಇವರನ್ನು ಪ್ರಾಚೀನ ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ 2 ವರ್ಷಗಳ ಅವಧಿಗೆ ಅಥವಾ ನಿವೃತ್ತಿ ಹೊಂದುವ ದಿನಾಂಕ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಯಾವುದು ಮೊದಲು ಘಟಿಸುವುದೋ ಅದುವರೆವಿಗೆ ನೇಮಕ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/10.28 | ಸರ್. ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದ ರಸ್ತೆ ನಿರ್ಮಾಣಕ್ಕಾಗಿ ಜಮೀನು ಖರೀದಿಸಿ, ಬದಲಾಗಿ ಜಮೀನು ಮಾಲಿಕರ ಮಗನಾದ ಶ್ರೀ ರಮೇಶ್ ಜೆ. ಇವರಿಗೆ ವಿಶ್ವವಿದ್ಯಾನಿಲಯದಲ್ಲಿ ಖಾಯಂ ಪರಿಚಾರಕ ಹುದ್ದೆಯನ್ನು ನೀಡುವ ಬಗ್ಗೆ. |

| | |
|---|---|
| ತೀರ್ಮಾನ | ಸರ್. ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದ ರಸ್ತೆ ನಿರ್ಮಾಣಕ್ಕಾಗಿ ಜಮೀನು ಖರೀದಿಸಿ, ಬದಲಾಗಿ ಜಮೀನು ಮಾಲಿಕರ ಮಗನಾದ ಶ್ರೀ ರಮೇಶ್ ಜೆ. ಇವರಿಗೆ ವಿಶ್ವವಿದ್ಯಾನಿಲಯದಲ್ಲಿ ಖಾಯಂ ನೇಮಕಾತಿ ಮಾಡಿಕೊಳ್ಳುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ನಂತರ ಸರ್ಕಾರದ ನಿರ್ದೇಶನದಂತೆ ಮುಂದಿನ ಕ್ರಮಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| 2019/10.29 | ಶ್ರೀಮತಿ ಸಿ.ಪಿ. ಸುನೀತ, ಪ್ರಾಂಶುಪಾಲರು, ಮಹಾರಾಜ ಕಾಲೇಜು, ಮೈಸೂರು ಇವರಿಗೆ ಫಿಲಿಪೈನ್ಸ್ ದೇಶಕ್ಕೆ ಹೋಗಿಬರಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ದಿನಾಂಕ 12-11-2019ರಿಂದ 21-11-2019ರವರೆಗೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಖಾಸಗಿಯಾಗಿ ಭೇಟಿ ನೀಡಲು ಶ್ರೀಮತಿ ಸಿ.ಪಿ. ಸುನೀತ, ಪ್ರಾಂಶುಪಾಲರು, ಮಹಾರಾಜ ಕಾಲೇಜು, ಮೈಸೂರು ಇವರಿಗೆ ಅನುಮತಿ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/10.30 | ಪರೀಕ್ಷಾ ವಿಭಾಗವನ್ನು ನವೀಕರಿಸಿ ಉತ್ಕೃಷ್ಟ ಪೀಠೋಪಕರಣಗಳನ್ನು ಅಳವಡಿಸುವ ಬಗ್ಗೆ. |
| ತೀರ್ಮಾನ | ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪೀಠೋಪಕರಣಗಳನ್ನು ಖರೀದಿಸಲು ಹಾಗೂ ಪರೀಕ್ಷಾ ವಿಭಾಗವನ್ನು ನವೀಕರಿಸಲು ನಿಯಮಾನುಸಾರ ಕ್ರಮಕೈಗೊಳ್ಳಲು ಸಭೆಯು ಅನುಮೋದಿಸಿತು. |
| 2019/10.31 | ಪರೀಕ್ಷಾ ಶಾಖೆಯ ಗಣಕಯಂತ್ರ ವಿಭಾಗಕ್ಕೆ High End Server for Digital Evaluation ಅಳವಡಿಸುವ ಬಗ್ಗೆ. |
| ತೀರ್ಮಾನ | ಸಭೆಯು ಅನುಮೋದಿಸಿತು |
| 2019/10.32 | Sanction of Sabbataical Leave to Prof.D.S. Guru, DOS in Computer Science, Manasagangotri, Mysuru and Prof. Y.H. Nayakawadi, DOS in History, Manasagangothri, Mysuru for a Period of one Year and acceptance of Final report of Dr.Khaiser Jahan Begum, Professor, DOS in Library & Information Science, Manasagangothri, Mysuru. |
| Decision: | The Syndicate has approved the recommendations of the Expert Committee to Sanction of Sabbataical Leave to Prof. D.S. Guru, DOS in Computer Science, Manasagangotri, Mysuru and Prof. Y.H. Nayakawadi, DOS in History, Manasagangothri, Mysuru for a Period of one Year.<br>Further, the Syndicate has also accepted the Final report submitted by Dr. Khaiser Jahan Begum, Professor, DOS in Library & Information Science, Manasagangothri, Mysuru carried out during the Sabbatical Leave period. |
| 2019/10.33 | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಖಾಲಿ ಇರುವ E-1 ವಸತಿಗೃಹವನ್ನು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಮೈಸೂರು ಕಛೇರಿಗೆ ಬಾಡಿಗೆಗೆ ನೀಡುವ ಬಗ್ಗೆ. |
| ತೀರ್ಮಾನ | ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಮೈಸೂರು ಇವರಿಗೆ ಕಛೇರಿ ಉಪಯೋಗಕ್ಕಾಗಿ ನಿಗಧಿತ ಅವಧಿಗೆ ಲೈಸೆನ್ಸ್ ಶುಲ್ಕವನ್ನು ನಿಗಧಿಪಡಿಸಿ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಖಾಲಿ ಇರುವ E-1 ವಸತಿಗೃಹವನ್ನು ಹಂಚಿಕೆ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/10.34 | Shushruthi Institute of Management Studies , Bengaluru ಇವರಿಗೆ ಹೊಸದಾಗಿ Management & Commerce ವಿಷಯದಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ- ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕ್ರಮಕೈಗೊಂಡಿರುವ ಬಗ್ಗೆ- ಅನುಸಮರ್ಥನೆಗಾಗಿ. |

| | |
|---|---|
| ತೀರ್ಮಾನ | Shushruthi Institute of Management Studies, Bengaluru ಇವರಿಗೆ ಹೊಸದಾಗಿ Management & Commerce ವಿಷಯದಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನ ಕೇಂದ್ರದ ಮಾನ್ಯತೆ ನೀಡುವ ಕುರಿತಂತೆ ವಿಶ್ವವಿದ್ಯಾನಿಲಯದಿಂದ ರಚಿತಗೊಂಡಿದ್ದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕ್ರಮಕೈಗೊಂಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| 2019/10.35 | 2019–20ನೇ ಶೈಕ್ಷಣಿಕ ಸಾಲಿಗೆ ಹೆಚ್ಚುವರಿಯಾಗಿ ಪ್ರವೇಶಾತಿ ನೀಡಿರುವ ಬಗ್ಗೆ. |
| ತೀರ್ಮಾನ | 2019-20ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯವಾಗುವಂತೆ ಹೆಚ್ಚುವರಿಯಾಗಿ ಎಂ.ಎಸ್ಸಿ. ಕಂಪ್ಯೂಟರ್ ಸೈನ್ಸ್ ಕೋರ್ಸ್‌ಗೆ 'ಎ' ಸ್ಕೀಂ ಅಡಿಯಲ್ಲಿ ಪ್ರವೇಶಾತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2019/10.36 | 2019–20ನೇ ಶೈಕ್ಷಣಿಕ ಸಾಲಿನ ಎಲ್ಲಾ ಸ್ನಾತಕೋತ್ತರ ಕೋರ್ಸುಗಳು ಹಾಗೂ ಹೊಸದಾಗಿ ಪ್ರಾರಂಭವಾದ ಕೋರ್ಸುಗಳಿಗೆ ಸೀಟುಗಳ ಸಂಖ್ಯೆಯನ್ನು ನಿಗದಿಪಡಿಸಿರುವ ಬಗ್ಗೆ. |
| ತೀರ್ಮಾನ: | ಸಭೆಯು ಅನುಸಮರ್ಥಿಸಿತು. |
| 2019/10.37 | Renewal of MOU between the University of Mysore and the GA Software Technologies Private Limited, Bengaluru. |
| Decision | Approved. |
| 2019/10.38 | Promotions to University Teachers Under UGC CAS |
| ತೀರ್ಮಾನ | ಸಭೆಯು ಅನುಮೋದಿಸಿತು. |
| 2019/10.39 | ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸುವ ಬಗ್ಗೆ. |
| ತೀರ್ಮಾನ | ಪ್ರತಿ ಮೂರು ವರ್ಷಗಳಿಗೊಮ್ಮೆ ಪುನರ್‌ರಚಿಸಲಾಗುವ ವಿವಿಧ ಅಧ್ಯಯನ ಮಂಡಳಿಗಳನ್ನು ಮತ್ತೊಮ್ಮೆ ಪುನರ್‌ರಚಿಸುವ ಅಧಿಕಾರವನ್ನು ಸಿಂಡಿಕೇಟ್ ಮಾನ್ಯ ಕುಲಪತಿಗಳಿಗೆ ನೀಡಲು ತೀರ್ಮಾನಿಸಿತು. |
| 2019/10.40 | 2019-20ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ಅಗತ್ಯ ವೆಚ್ಚ ಶೀರ್ಷಿಕೆಗಳಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಲಾಗುವ ಬಗ್ಗೆ. |
| ತೀರ್ಮಾನ | 2019-20ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ಅಗತ್ಯ ವೆಚ್ಚ ಶೀರ್ಷಿಕೆಗಳಲ್ಲಿ ಹೆಚ್ಚುವರಿಯಾಗಿ ಮರುಹೊಂದಾಣಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2019/10.41 | 2019-20ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಮರುಹೊಂದಾಣಿಕೆ ಬಗ್ಗೆ. |
| ತೀರ್ಮಾನ | ಸಭೆಯು ಅನುಮೋದಿಸಿತು. |
| 2019/10.42 | ಮೈಸೂರು ವಿಶ್ವವಿದ್ಯಾನಿಲಯ Industry ಮತ್ತು ಇವರುಗಳ ನಡುವೆ Mutual Academic Industrial Collaboration System ವಿಷಯದಲ್ಲಿ ಪರಸ್ಪರ ಒಡಂಡಿಕೆ ಮಾಡಿಕೊಳ್ಳುವ ಬಗ್ಗೆ. |
| ತೀರ್ಮಾನ | ಸಭೆಯು ಅನುಮೋದಿಸಿತು. |
| 2019/10.43 | ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ) ಮತ್ತು ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರುಗಳಿಗೆ, ವಾಹನ ಚಾಲಕರುಗಳಿಗೆ ಮತ್ತು ನಾಲ್ಕನೇ ದರ್ಜೆ ನೌಕರರುಗಳಿಗೆ ನೀಡುತ್ತಿರುವ ವಿಶೇಷ ಭತ್ಯೆಯನ್ನು ಪರಿಷ್ಕರಿಸುವ ಬಗ್ಗೆ. |
| ತೀರ್ಮಾನ | ಅಧಿಕಾರಿಗಳ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಆಪ್ತ ಸಹಾಯಕರುಗಳಿಗೆ ನೀಡುತ್ತಿರುವ ವಿಶೇಷ ಭತ್ಯೆಯನ್ನು ರೂ.500/–ಗಳಿಂದ 2000/–ಗಳಿಗೆ ಹಾಗೂ ವಾಹನ ಚಾಲಕರುಗಳಿಗೆ ಮತ್ತು ನಾಲ್ಕನೇ ದರ್ಜೆ ನೌಕರರುಗಳಿಗೆ ನೀಡುತ್ತಿರುವ ವಿಶೇಷ ಭತ್ಯೆಯನ್ನು ರೂ.250/–ಗಳಿಂದ ರೂ.1000/–ಗಳಿಗೆ ಹೆಚ್ಚಿಸಿ ಪರಿಷ್ಕರಿಸಲು ಸಭೆಯು ಅನುಮೋದಿಸಿತು. |

| | |
|---|---|
| 2019/10.44 | ಪಿಂಚಣಿ ವಿಭಾಗದಲ್ಲಿನ FDR ಮೊತ್ತವನ್ನು ಪಿಂಚಣಿ Corpusಗೆ ಸೇರಿಸಿಕೊಳ್ಳುವ ಬಗ್ಗೆ. |
| ತೀರ್ಮಾನ | ಸಭೆಯು ಅನುಮೋದಿಸಿತು. |
| 2019/10.45 | ನಟರಾಜ್. ಎಸ್. ಸಂಶೋಧನಾ ಅಭ್ಯರ್ಥಿ, ಇವರು ಮಹಾಪ್ರಬಂಧವನ್ನು ಸಲ್ಲಿಸಲು ಹೆಚ್ಚುವರಿಯಾಗಿ ಕಾಲಾವಕಾಶವನ್ನು ಕೋರಿರುವ ಬಗ್ಗೆ. |
| ತೀರ್ಮಾನ | ಶ್ರೀ ನಟರಾಜ್ ಎಸ್. ಸಂಶೋಧನಾ ಅಭ್ಯರ್ಥಿ ಇವರು ಮಹಾಪ್ರಬಂಧವನ್ನು ಸಲ್ಲಿಸಲು ಇವರಿಗೆ ಹೆಚ್ಚುವರಿಯಾಗಿ ಕಾಲಾವಕಾಶವನ್ನು ನೀಡಲು ಪಿಎಚ್.ಡಿ. ನಿಯಮಗಳಲ್ಲಿ ಅವಕಾಶವಿಲ್ಲದಿರುವುದರಿಂದ ಹೊಸದಾಗಿ ನೊಂದಾವಣಿ ಮಾಡುವಂತೆ ಸಂಶೋಧನಾ ಅಭ್ಯರ್ಥಿಗೆ ಸೂಚಿಸಲು ಸಭೆಯು ತೀರ್ಮಾನಿಸಿತು. |
| 2019/10.46 | ಪ್ರತಿಭಾ. ಪಿ. ಸಂಶೋಧನಾ ಅಭ್ಯರ್ಥಿ ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| ತೀರ್ಮಾನ | ರೂ.50,000/-ಗಳ ದಂಡ ಶುಲ್ಕದೊಂದಿಗೆ ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆಗೆ ಅಭ್ಯರ್ಥಿಯು ಕೋರಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |
| 2019/10.47 | ಪೂರ್ಣಚಂದ್ರ. ಹೆಚ್.ಎಲ್. ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| ತೀರ್ಮಾನ | ಶ್ರೀ ಪೂರ್ಣಚಂದ್ರ. ಹೆಚ್.ಎಲ್. ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ಹೆಚ್ಚುವರಿಯಾಗಿ ಕಾಲಾವಕಾಶವನ್ನು ನೀಡಲು ಪಿಎಚ್.ಡಿ. ನಿಯಮಗಳಲ್ಲಿ ಅವಕಾಶವಿಲ್ಲದಿರುವುದರಿಂದ ಹೊಸದಾಗಿ ನೊಂದಾವಣಿ ಮಾಡುವಂತೆ ಸಂಶೋಧನಾ ಅಭ್ಯರ್ಥಿಗೆ ಸೂಚಿಸಲು ಸಭೆಯು ತೀರ್ಮಾನಿಸಿತು. |
| 2019/10.48 | ದೂರಶಿಕ್ಷಣ ವ್ಯವಸ್ಥೆಯನ್ನು Sec 40(1)(F) ಹಾಗೂ 4(ii) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಮೇರೆಗೆ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿ, ಯುಜಿಸಿ ನಿಯಮದನ್ವಯ ಸುಸಜ್ಜಿತ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರುವ ಬಗ್ಗೆ. |
| ತೀರ್ಮಾನ | ದೂರಶಿಕ್ಷಣ ವ್ಯವಸ್ಥೆಯನ್ನು Sec 40(1)(F) ಹಾಗೂ 4(ii) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಮೇರೆಗೆ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿ, ಯುಜಿಸಿ ನಿಯಮದನ್ವಯ ಸುಸಜ್ಜಿತ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರುವ ಸಂಬಂಧ ರಚಿಸಲಾಗಿರುವ ಕರಡು ಅಧಿನಿಯಮವನ್ನು ಸಿಂಡಿಕೇಟ್ ಅನುಮೋದಿಸಿತು.<br>ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಕೇಂದ್ರಗಳನ್ನು ಮೈಸೂರು ಹಾಗೂ ಇತರೆ ಸ್ಥಳಗಳಲ್ಲಿ ಪ್ರಾರಂಭಿಸಲು ನಿರ್ಧರಿಸಿರುವುದರಿಂದ, ಆಡಳಿತ ಸುಲಲಿತವಾಗಿ ನಡೆಯಲು ಮೂವರು ಸಂಯೋಜಕರನ್ನು ನೇಮಕ ಮಾಡಿಕೊಳ್ಳಲು ಸನ್ಮಾನ್ಯ ಕುಲಪತಿಯವರಿಗೆ ಅಧಿಕಾರವನ್ನು ನೀಡಿ ಒಂದು ವೇಳೆ ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳು ಸಂಯೋಜಕರ ಹುದ್ದೆಗೆ ವಿದ್ಯಾರ್ಹತೆಯನ್ನು ಹೊಂದಿದ್ದಲ್ಲಿ ಅಭ್ಯರ್ಥಿಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000ರ ಪ್ರಕಾರ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಸಹ ತೀರ್ಮಾನಿಸಲಾಗಿ ಸದರಿಯವರ ವೇತನವನ್ನು ಜಿಆರ್ಎ ಖಾತೆಯಿಂದ ಭರಿಸಲು ಸಹ ತೀರ್ಮಾನಿಸಲಾಯಿತು. |
| 2019/10.49 | ಶಾಸ್ತ್ರಿಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಅಗತ್ಯವಾಗಿರುವ ಜಾಗವನ್ನು ನೀಡುವ ಬಗ್ಗೆ. |
| | ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 3(4)ರ ಪ್ರಕಾರ ವಿಶ್ವವಿದ್ಯಾನಿಲಯದ ಆಸ್ತಿಯನ್ನು ಲೀಸ್, ಮಾರಾಟ, ವರ್ಗಾವಣೆ ಸಂಬಂಧ ಸರ್ಕಾರದ ಪೂರ್ವಾನುಮೋದನೆ ಪಡೆಯುವ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂಬ ವಿಷಯವನ್ನು ಮಾನ್ಯ ಕುಲಪತಿಗಳು ಸಭೆಯಲ್ಲಿ ವಿವರಿಸಿದರು. |
| ತೀರ್ಮಾನ | ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ 400 x 325 (3 ಎಕರೆ) ಜಾಗವನ್ನು 30 ವರ್ಷಗಳ ಅವಧಿಗೆ ಕೊಡಲು ಒಪ್ಪಲಾಯಿತು. ಸದರಿ ಅವಧಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಬೇಕಾದರೆ ವಿಶ್ವವಿದ್ಯಾನಿಲಯದ ಗಮನಕ್ಕೆ ತರಬೇಕೆಂಬ ಷರತ್ತಿಗೊಳಪಟ್ಟು ಅನುಮೋದಿಸಲಾಯಿತು. |

| | |
|---|---|
| 2019/10.50 | ಶ್ರೀ ಎನ್. ನಾಗರಾಜು, ಪ್ರಥಮ ದರ್ಜೆ ಗುಮಾಸ್ತರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸ್ವಯಂ ನಿವೃತ್ತಿ ಪಡೆಯಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಶ್ರೀ ಎನ್. ನಾಗರಾಜು, ಪ್ರಥಮ ದರ್ಜೆ ಗುಮಾಸ್ತರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 30-11-2019ರಂದು ಸ್ವಯಂ ನಿವೃತ್ತಿ ಹೊಂದಲು ಸಿಂಡಿಕೇಟ್ ಅನುಮೋದಿಸಿತು. |
| 2019/10.51 | ಶ್ರೀ ಅಶೋಕ ವೈ ತುಪಸುಂದರ, ಹಾಕಿ ತರಬೇತುದಾರರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಯ ಬಗ್ಗೆ. |
| ತೀರ್ಮಾನ | ಶ್ರೀ ಅಶೋಕ ವೈ ತುಪಸುಂದರ, ಹಾಕಿ ತರಬೇತುದಾರರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಹುದ್ದೆರಹಿತವಾಗಿ ಸರ್ಕಾರದ ಅನುಮೋದನೆಯೊಂದಿಗೆ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇಲ್ಲಿ ಖಾಲಿಯಿರುವ ಹುದ್ದೆಗೆ ಎದುರಾಗಿ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಗೆ ಸಭೆಯು ಅನುಮೋದಿಸಿತು. |
| 2019/10.52 | ವಿಶ್ವವಿದ್ಯಾನಿಲಯದಿಂದ ಸ್ಥಾಪಿತವಾಗಿರುವ International School of Information Management ಕೇಂದ್ರದ ಕುರಿತು. |
| ತೀರ್ಮಾನ | ವಿಶ್ವವಿದ್ಯಾನಿಲಯದಿಂದ ಸ್ಥಾಪಿಸಲ್ಪಟ್ಟಿದ್ದ International School of Information Management ಕೇಂದ್ರದ ಚರ/ಸ್ಥಿರಾಸ್ತಿಗೆ ಪಡೆದಿರುವ ಸಾಲ ಹಾಗೂ ಬಡ್ಡಿಯ ಮೊತ್ತವನ್ನು "ಸಹೋದ್ಯಮ ಕೋರ್ಸ್" ಶೀರ್ಷಿಕೆಯಿಂದ ಭರಿಸಲು ಸಿಂಡಿಕೇಟ್ ಅನುಮೋದಿಸಿತು. |
| 2019/10.53 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ Furnishing of Network Operation Centre at University of Mysore, Mysore ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ. |
| ತೀರ್ಮಾನ | ಸಭೆಯು ಅನುಮೋದಿಸಿತು. |
| 2019/10.54 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ Campus wide Intelligent Surveilance System Along with RF. Connectivity ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ. |
| ತೀರ್ಮಾನ | ಸಭೆಯು ಅನುಮೋದಿಸಿತು |
| 2019/10.55 | Visit of Prof. G. Hemantha Kumar, Vice-Chancellor, University of Mysore, Mysuru to University of Barcelona, Spain. |
| Decision | The Syndicate has permitted Prof. G. Hemantha Kumar, Vice-Chancellor, University of Mysore, Mysuru to visit University of Barcelona, Spain from 05-01-2020 to 10-01-2020 without any financial commitment on the part of the University of Mysore. |

**ಇತರೆ ವಿಷಯಗಳು:**

- All Chairman/Directors/Coordinators of the various departments are supposed to maintain the seniority in the attendance list and the Chairman/Directors/coordinators name should be retained in the seniority position.

- Chairmen can handover the charge to whom he wishes by giving priority to senior colleagues of the department during his/her leave period. The in-charge chairman should not exercise the power in relation to financial matters.
- Regarding Valmiki Chair/Institution at University of Mysore, representation given from Legislative Members has been discussed and resolved that the University administrative authority will approach the State Government for the Corpus fund about FIVE CRORES. If the government releases the amount further action will be takenup.
- There were some grievance of the teachers regarding CAS promotions were addressed by the Committee under the Chairmanship of Prof.T.K.Umesh. The report was placed in the Syndicate to issue the correct order. Syndicate opines that before issuing the order legal opinion shall be obtained.
- ಮಾನಸಗಂಗೋತ್ರಿಯ ಪ್ರೌಢಶಾಲೆ ಸಮಸ್ಯೆಯ ಕುರಿತು ಚರ್ಚಿಸಿದ ಸಭೆಯು ಕುಲಸಚಿವರ ಅಧ್ಯಕ್ಷತೆಯಲ್ಲಿ ಸಿಂಡಿಕೇಟ್ ಸದಸ್ಯರುಗಳಾದ ಕುಮಾರಿ ಸಹನ ಶಿವಪ್ಪ, ಡಾ. ಕೆ.ಕೆ.ವಿಶಾಲಾಕ್ಷಿ, ಡಾ.ಜಯರಾಂ, ಪ್ರೊ.ಮಹದೇವ್ ಮತ್ತು ಶ್ರೀ ಅಶ್ವತ್ಥನಾರಾಯಣ ಅವರನ್ನೊಳಗೊಂಡಂತೆ ಸಿಂಡಿಕೇಟ್ ಉಪಸಮಿತಿಯನ್ನು ರಚಿಸಿ 10-11-2019ರೊಳಗೆ ಒಂದು ಸಭೆಯನ್ನು ನಡೆಸಿ ವರದಿಯನ್ನು ಸಲ್ಲಿಸಲು ಮಾನ್ಯ ಕುಲಪತಿಗಳು ಸಭೆಯಲ್ಲಿ ಸೂಚಿಸಿದರು.
- ಡಾ. ವಿಶಾಲಾಕ್ಷಿರವರು ಮಾತನಾಡಿ ಪರೀಕ್ಷಾಂಗ ವಿಭಾಗದಲ್ಲಿ Manual Hand book maintain ಮಾಡಲು ಸಲಹೆ ನೀಡಿದರು.
- ಪ್ರೊ.ಮಹದೇವ್‌ರವರು ವಿಶ್ವವಿದ್ಯಾನಿಲಯದ ಗ್ರಂಥಾಲಯ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ತಿಳಿಸಿ, ತಾಂತ್ರಿಕವಾಗಿ ಉನ್ನತೀಕರಿಸಲು ಸಭೆಯನ್ನು ಕೋರಿದರು.

ಕೊನೆಯಲ್ಲಿ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದಂತಹ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

| | |
|---|---|
| ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ | ಕುಲಪತಿ ಮತ್ತು ಅಧ್ಯಕ್ಷರು |